ತಾರೀಖು 2ನೆ ಮಾರ್ಚಿ 1907.

ನಂ. ಜೆ. 2667— ಕೋರ್ಟ್ಸ್ 207-06—2, ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 37ನೆ ಪ್ರಕರಣದ ಮೇರೆಗೆ, ದಾವಣಗೆರೆ ಸಬ್ ಡಿವಿಜನಿನ ಅಸಿಸ್ಟೆಂಟ್ ಕಮಿಷನರು ವ.ತ್ತು ಮೊದಲನೆಯ ಕ್ಲಾಸ್ ಮಾಜಿಸ್ಟ್ರೇಟರಾದ ಮಿ॥ ಕೆ. ಚಾಂಡಿಯವರಿಗೆ ಸದರಿ ಕೋಡಿನ 110ನೆ ಪ್ರಕರಣದ ಮೇರೆಗೆ ವಳ್ಳಿಯ ನಡತೆಗೋಸ್ಕರ ಜಾಮೀನ್ ಕೇಳುವ ಅಧಿಕಾರವನ್ನು ಕೊಟ್ಟಿದೆ.

ತಾರೀಖು 5ನೆ ಮಾರ್ಚಿ 1907.

ನಂ. ಜೆ. 2693—ಕೋರ್ಟ್ಸ್ 210-06—2, ಸಿವಿಲ್ ಪ್ರೊಸೀಜ್ಯರ್ ಕೋಡಿನ 641ನೆ ಪ್ರಕರಣದ ಮೇರೆಗೆ, ತಿರುವಾಂಕೂಡ್ಲು ನಲ್ಲೀಪುರ ತಾಲ್ಲೂಕಿನ ಸೋಸಲೆ ಗ್ರಾಮದ ಶ್ರೀ ವ್ಯಾಸರಾಯಸ್ವಾಮಿ ಮಠದ ಸ್ವಾಮಿಗಳು ಶ್ರೀಮದ್ವಿದ್ಯಾ ಶ್ರೀ ರತ್ನಾಕರ ತೀರ್ಥ ಶ್ರೀಪಾದಂಗಳವರನ್ನು ಸಿವಿಲ್ ಕೋರ್ಟುಗಳಲ್ಲಿ ಮುದ್ದಾ ಹಾಜರಾಗುವುದರಿಂದ ವಿನಾಯಿಸುವಂತೆ ಶ್ರೀಮನ್ ಮಹಾರಾಜರವರ ಸರ್ಕಾರದವರು ಇದರಿಂದ ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 22ನೆ ಫೆಬ್ರವರಿ 1907.

ನಂ. ರೆ. 7701—ಫಾರೆಸ್ಟ್ಸ್ 128-06—2, ಸ॥ 1900ನೆ ಇಸವಿಯ XIನೆ ನಂಬರು ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನ್ 4ನೆ ಪ್ರಕರಣದ ವಿಧಿಗಳನ್ನನುಸರಿಸಿ ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ ಇದರಡೀ ಕಂಡ ಪೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನಿನ ವಿಧಿಗಳಂತೆ ಸ್ಪೇಷಲ್ ಫಾರೆಸ್ಟ್ಸಾಗಿ ವರ್ಜಿಡತಕ್ಕದ್ದೆಂದು ಯೋಚಿಸಿರುತ್ತ.

ಡಿಸ್ಟ್ರಿಕ್ಟ್	ತಾಲ್ಲೂಕು ಹೋಬಳಿ ಇಲ್ಲವೆ ಗ್ರಾಮ.	ಸುಮಾರು ವಿಸ್ತೀರ್ಣ ಎಕ್ರೆ.	ಬ್ಲಾಕಿನ ಹೆಸರು	ಸ್ಥಳದ ಚಕ್ಕುಬಂದಿ
ಮೈಸೂರು.	ಹುಣಸೂರು ತಾಲ್ಲೂಕು, ಹರಣಿಹಳ್ಳಿ ಹೋಬಳಿ.	ಒಟ್ಟು 82 ಎಕ್ರೆ. 678	ಕೆಂಬೋರೆಹಳ್ಳದ ಸ್ಪೆಷಲ್ ಫಾರೆಸ್ಟ್.	ಸ್ಥಳ.—ದೊಡ್ಡಹರವೆ ಸ್ಪೇಟ್ ಫಾರೆಸ್ಟಿನ ಪೂರ್ವ ಸರಹದ್ದನ್ನಿನುವ ಕೆಂಬೋರೆ ಹಳ್ಳದಮೇಲೆ ಇರುತ್ತದೆ. ಮತ್ತು ಮೈಸೂರು ಡಿಸ್ಟ್ರಿಕ್ಟ್ ಹುಣಸೂರು ತಾಲ್ಲೂಕು ಪೆರಿಯಾಪಟ್ಟಣ ಪ್ರೈಜರ್‌ಪೇಟೆ ಹೈರೋಡ್ ಮೇಲಿರುವ ಕೂಪ್ಪಗ್ರಾಮಕ್ಕೆ ನೈರುತ್ಯದಿಕ್ಕಿಗೆ ಸುಮಾರು ಒಂದು ಮೈಲಿ ದೂರದಲ್ಲಿರುತ್ತದೆ.

ಚಕ್ಕುಬಂದಿ.

ಉತ್ತರಕ್ಕೆ—ಕೆಂಬೋರೆಹಳ್ಳದ ಮೇಲಿರುವ ದೊಡ್ಡಹರವೆ ಫಾರೆಸ್ಟಿನ ಸರಹದ್ದು ಕಲ್ಲಿನ ವಾಯವ್ಯ ಮೂಲೆಯಿಂದ ಹೊರಟು, ಲೈ॥ ಈಶಾನ್ಯದಿಕ್ಕಿಗೆ ಮೇಲೆ ಹೇಳಲ್ಪಟ್ಟ ನದಿಯನ್ನನುಸರಿಸಿ, ಸದರಿ ನದಿಯು ಜೋಡಹಳ್ಳವನ್ನು ಸೇರುವ ಜಾಗಕ್ಕೆ ಕಳ್ಳಮ್ಮನಕುಮರಿ ಗ್ರಾಮದ 38 ಸರ್ವೆ ನಂಬರ ಉತ್ತರ ದಿಕ್ಕಿನ ಕೊನೆ ಭಾಗದಲ್ಲಿ ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ ಹೊರಟು, ಕಳ್ಳಮ್ಮನಕುಮರಿ, ಅರಳಿಕುಮರಿ ಮತ್ತು ಲಕ್ಷ್ಮೀಪುರ ಗ್ರಾಮಗಳು ಸೇರುವ ಜೋಡಹಳ್ಳಕ್ಕೆ ಹೋಗುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ಸದರಿ ಲೈ॥ ಅರಳಿಕುಮರಿ ಗ್ರಾಮದ ಉತ್ತರ ಸರಹದ್ದನ್ನು ಅನುಸರಿಸಿ, ಅರಳಿಕುಮರಿ, ಕಾಳಮ್ಮನಕುಮರಿ ಗ್ರಾಮಗಳ ಮತ್ತು ದೊಡ್ಡಹರವೆ ಸ್ಪೇಟ್ ಫಾರೆಸ್ಟ್ ಇವು ಮೂರು ಸೇರುವ ಕೆಂಬೋರೆಹಳ್ಳಕ್ಕೆ ಹೋಗುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಮೇಲ್ಕಂಡ ಕೆಂಬೋರೆಹಳ್ಳವನ್ನು ತಟ್ಟುವ ಹೊರಟ ಜಾಗಕ್ಕೆ ಸೇರುತ್ತದೆ.

2 ಸದರಿ ಪ್ರಕರಣದ (c) ವಾಕ್ಯದ ಮೇರೆಗೆ, ಮೈಸೂರು ಸೀಮೆಯ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮಿ॥ ಎಂ. ಶಾಮರಾಯರವರನ್ನು ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರನ್ನಾಗಿ ಮೊಕರರ್ರಾಡಲು ಮೈಸೂರು ಶ್ರೀಮನ್ ಮಹಾರಾಜರವರು ಹುಕುಂ ದಯಪಾಲಿಸಿರುತ್ತಾರೆ. ಮತ್ತು ಮಿ॥ ಶಾಮರಾಯರವರು ಸದರಿ ಎಲ್ಲಿಗಳಿಂದ ಆವೃತವಾಗಿರುವ ಜಮೀನಿನಲ್ಲಿ ಅಥವಾ ಜಮೀನಿನಮೇಲೆ ಅಥವಾ ಅಂಥಾ ಭೂಮಿಯ ಯಾವುವಾದರೂ ಜಂಗಲಿ ಉತ್ಪತ್ತಿಗೆ ಯಾವ ಮನುಷ್ಯನಿಗಾಗಲಿ ಅಥವಾ ಯಾವ ಮನುಷ್ಯನ ಪರವಾಗಿಯಾಗಲಿ ಉಂಟೆಂದು ಹೇಳಲ್ಪಡುವ ಹಕ್ಕುಗಳ ಇರವಿಕೆ, ಸ್ವಭಾವ, ಮತ್ತು ಪರಿಮಾಣವನ್ನು ಕುರಿತು ವಿಚಾರಮಾಡಿ ಅವುಗಳನ್ನು ನಿಷ್ಕರ್ಷೆ ಮಾಡತಕ್ಕದ್ದು; ಮತ್ತು ಸದರಿ ರೆಗ್ಯುಲೇಷನಿನ 2ನೆ ಅಧ್ಯಾಯದ ನಿಯಮಗಳ ಮೇರೆಗೆ ಆ ವಿಷಯದಲ್ಲಿ ಕ್ರಮ ಜರಗಿಸತಕ್ಕದ್ದು. ಮತ್ತು ತತ್ಕಾಲದಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರು ನಡೆಸುವ ವಿಚಾರಣೆಯಲ್ಲಿ ಅವರಿಗೆ ಸರ್ಕಾರದವರ ಪರವಾಗಿ ಸಹಾಯಕರಾಗಿರತಕ್ಕದ್ದು.

3. ಸದರಿ ರೆಗ್ಯುಲೇಷನಿನ 15ನೆ ಪ್ರಕರಣದಿಂದ ತಮಗೆ ಕೊಡಲ್ಪಟ್ಟ ಅಧಿಕಾರದ ಮೇರೆಗೆ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ತತ್ಕಾಲದಲ್ಲಿನ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರನ್ನು, ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣಗಳ ಮೇರೆಗೆ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರ ಹುಕುಮಿನಮೇಲೆ ಬರುವ ಅಪ್ಪೀಲುಗಳನ್ನು ಕೇಳುವ ರೆವಿನ್ಯೂ ಇಲಾಖೆಯ ಆಫಿಸರಾಗಿ ನೇಮಿಸಲು ಹುಕುಂ ದಯಪಾಲಿಸಿರುತ್ತಾರೆ.